## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 32/2020 ಪಿ.ಡಬ್ಲ್ಯೂಃ 2

ಸಿ.ಡಬ್ಲ್ಯೂಃ 3

ಸಾಕ್ಷಿದಾರರ ಹೆಸರು : ಆನಂದು
ತಂದೆಯ ಹೆಸರು : ರಮೇಶ್ ರಾಠೋಡ್
ವಯಸ್ಸು : 25 ವರ್ಷ
ಉದ್ಯೋಗ : ದಿನಗೂಲಿ ನೌಕರ
ವಾಸ್ತವ್ಯ : ಬಿಜಾಪುರ .

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 24-04-2023.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನಾನು ನಿಪಿ.2 ಕ್ಕೆ 04.02.2019 ರಂದು ರಾಮನಾಥ ದೇವಸ್ಥಾನ ಕ್ರಾಸ್ ಹತ್ತಿರ ಸಹಿ ಮಾಡಿರುತ್ತೇನೆ. ನನ್ನ ಜೊತೆ ಚಾಸಾ.2 ರವರು ಸಹ ಇದ್ದು , ನಿಪಿ.2 ಕ್ಕೆ ಸಹಿ ಮಾಡಿರುತ್ತಾರೆ. ಚಾಸಾ.1 ರವರು ಘಟನಾ ಸ್ಥಳವನ್ನು ತೋರಿಸಿರುತ್ತಾರೆ. ಆ ಸಮಯಕ್ಕೆ ಘಟನಾ ಸ್ಥಳದಲ್ಲಿ ವಾಹನವಿದ್ದು , ಸದರಿ ವಾಹನದ ಸಂಖ್ಯೆ ಜಿ ಎ 08 ವೈ 1243 ಆಗಿತ್ತು. ನಿಪಿ.2 ನ್ನು ಬೆಳಿಗ್ಗೆ ಸುಮಾರು 11 ರಿಂದ 12 ಗಂಟೆಯವರೆಗೆ ಬರೆದಿರುತ್ತಾರೆ. ನ್ಯಾಯಾಲಯದ ಮುಂದಿರುವ ನಿಪಿ.2 ನ್ನು ನೋಡುತ್ತಿದ್ದು , ಗುರುತಿಸುತ್ತೇನೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ.2 ಬಿ ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಪೋಲೀಸರು ಹಾಥ ನಕಾಶೆ ನಿಪಿ.3 ನ್ನು ತಯಾರಿಸಿದ್ದು , ಅದನ್ನು ಗುರುತಿಸುತ್ತೇನೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ.3 ಬಿ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ನಿಪಿ.4 ಮತ್ತು 5 ನ್ನು ನೋಡಿ ಗುರುತಿಸುತ್ತೇನೆ.

**ಪಾಟಿ ಸವಾಲುಃ ಶ್ರೀ ಸಿ ಡಿ ಎನ್ ವಕೀಲರು ಪಾಟೀ ಸವಾಲು**

2. ಚಾಸಾ.1 ರವರು ಬಿಜಾಪುರದವರು. ಚಾಸಾ.2 ರವರು ಸಹ ಬಿಜಾಪುರದವರು. ಮೃತ ವ್ಯಕ್ತಿ ರವಿ ಲಮಾಣಿ ಇವರೂ ಸಹ ಬಿಜಾಪುರದವರು. ನಾನು ಕೆಲಸದ ಸಲುವಾಗಿ ಬಿಜಾಪುರದಿಂದ ಕಾರವಾರಕ್ಕೆ ಬಂದಿರುತ್ತೇನೆ ಎಂದರೆ ಸರಿ. ನನಗೆ ಮೃತ ವ್ಯಕ್ತಿ ರವಿ , ಚಾಸಾ.1 ಮತ್ತು 2 ರವರು ಮೊದಲಿನಿಂದಲೂ ಪರಿಚಯ. ಘಟನಾ ದಿನದಂದು ಮಾಜಾಳಿಯಲ್ಲಿರುವ ರಾಮನಾಥ ದೇವಸ್ಥಾನದ ಹತ್ತಿರ ಇದ್ದೆನು. ನಾನು , ಮೃತ ವ್ಯಕ್ತಿ ರವಿ , ಚಾಸಾ.1 ಮತ್ತು 2 ರವರು ಒಂದೇ ಕಡೆ ಇರುತ್ತಿದ್ದೆವು ಎಂದರೆ ಸರಿ. ಅಪಘಾತವಾದ ದಿನ

ನಾನು ಕ್ಯಾಂಪಿನಲ್ಲಿ ಇದ್ದೆ. ಗೋವಾದಿಂದ ಕಾರವಾರಕ್ಕೆ ಬರುವ ಮತ್ತು ಕಾರವಾರದಿಂದ ಗೋವಾಕ್ಕೆ ಹೋಗುವ ರಸ್ತೆಯ ಪರಿಚಯ ನನಗೆ ಇದೆ ಎಂದರೆ ಸರಿ. ಅಪಘಾತವಾಗುವ 2 – 3 ದಿನ ಮೊದಲು ನಾನು ಸದರಿ ರಸ್ತೆಯಲ್ಲಿ ಓಡಾಡಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಗೋವಾದಿಂದ ಕಾರವಾರಕ್ಕೆ ಬರುವ ಮಾವಿನಹೊಳೆ ಹಳ್ಳ ದ ಹತ್ತಿರ ರಸ್ತೆಯ ಡಾಂಬರೀಕರಣ ಮತ್ತು ಬ್ರಿಜ್ಜ ಕೆಲಸ ನಡೆಯುತ್ತಿತ್ತು ಎಂದರೆ ಸರಿ. ರಸ್ತೆ ಕೆಲಸ ನಡೆಯುತ್ತಿದ್ದರಿಂದ ಒಂದೇ ರಸ್ತೆಯಲ್ಲಿ ಕಾರವಾರದಿಂದ ಗೋವಾಕ್ಕೆ ಮತ್ತು ಗೋವಾದಿಂದ ಕಾರವಾರಕ್ಕೆ ಬರುವ ವಾಹನಗಳನ್ನು ಬಿಡುತ್ತಿದ್ದರೆಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಎಂದರೆ ಸರಿ. ನಿಪಿ.2 ನ್ನು ನಾನು ಆ ದಿವಸ ಓದಿರುವುದಿಲ್ಲಾ ಎಂದರೆ ಸರಿ. ಅಪಘಾತ ಪಡಿಸಿದ ವಾಹನವನ್ನು ಗೋವಾ ಕಡೆಗೆ ಮುಖ ಮಾಡಿ ನಿಲ್ಲಿಸಿದ್ದರು. ನಾನು ಘಟನಾ ಸ್ಥಳದಲ್ಲಿ ನೋಡಿದಾಗ ದ್ವಿಚಕ್ರ ವಾಹನವನ್ನು ನಿಲ್ಲಿಸಿಟ್ಟಿದ್ದರು. ಘಟನಾ ಸ್ಥಳದಲ್ಲಿ ಬ್ಯಾರಿಕೇಡ ಹಾಕಿ ರಸ್ತೆಯನ್ನು ಬಂದ ಮಾಡಿರಲಿಲ್ಲಾ. ಚಾಸಾ.1 ರವರು ಸದರಿ ದಿನದಂದು ಸಹಿ ಮಾಡಿರುತ್ತಾರೆ. ಚಾಸಾ.1 ರವರು ನನಗೆ ಕರೆ ಮಾಡಿ ಕರೆಸಿದ್ದರು. ನಾನು ಘಟನಾ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ನಾನು ಆ ದಿವಸ ಠಾಣೆಗೆ ಹೋಗಿರುತ್ತೇನೆ. ನನ್ನ ಸಹಿಯನ್ನು ಠಾಣೆಯಲ್ಲಿ ತೆಗೆದುಕೊಂಡಿರುವುದಿಲ್ಲಾ. ನಾನು ಆ ದಿವಸ ಠಾಣೆಗೆ ಬಂದಿದ್ದು , ಠಾಣೆಯಲ್ಲೇ ನಿಪಿ.2 ಮತ್ತು 3 ಕ್ಕೆ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಮೃತ ವ್ಯಕ್ತಿ ರವಿ , ಚಾಸಾ.1 ಮತ್ತು 2 ರವರು ನಮ್ಮ ಊರಿನವರಾಗಿದ್ದು , ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಬಿಳಿ ಬಣ್ಣದ ಎಕ್ಟಿವಾ ದ್ವಿಚಕ್ರ ವಾಹನವನ್ನು ಸ್ಥಳದಲ್ಲಿ ನೋಡಿರುತ್ತೇನೆ , ಠಾಣೆಯಲ್ಲಿ ನೋಡಿರುವುದಿಲ್ಲಾ. ನಾನು ಸದರಿ ವಾಹನದ ನಂಬರನ್ನು ಪಂಚನಾಮೆ ಮಾಡುವ ಕಾಲಕ್ಕೆ ನೋಡಿರುತ್ತೇನೆ. ನಿಪಿ.4 ಮತ್ತು 5 ನ್ನು ಘಟನಾ ಸ್ಥಳದಲ್ಲಿ ತೆಗೆದಿದೆ ಎಂದು ಹೇಳಲು ಅವುಗಳ ಮೇಲೆ ದಿನಾಂಕ ಮತ್ತು ಸಮಯ ಇರುವುದಿಲ್ಲಾ ಎಂದರೆ ಸರಿ. ನಿಪಿ.4 ಮತ್ತು 5 ರಲ್ಲಿ ಕಾಣಿಸುವ ಸ್ಥಳ ಪೋಲೀಸ ಠಾಣೆಯ ಹಿಂದುಗಡೆಯ ಸ್ಥಳ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲಾ –**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )**

**ಓ.ಹೇ.ಕೆ. ಸರಿ ಇದೆ.**

**ಹೆ .ದ.ನಾ.ದಂ. ಕಾರವಾರ.**